IJRESS Volume 1, Issue 1(October, 2011) (ISSN 2249-7382)
International Journal of Research in Economics and Social Sciences

# ಕವಿಗಳ ಪರಿಕಲ್ಪನೆಯಲ್ಲಿಕ್ರಿಸ್ತ ಮತ್ತುಕ್ರಿಸ್‌ಮಸ್

– **ಮಾರ್ಷಲ್ ಶರಾಂ.**

# IN POINT OF VIEW IF THE POET CHRIST AND CHRISMAS

– **Marshal Sharam**
Associate of Professor
Dept of Kannada
Govt. First Grade College,
Hosanagar 577 418

ಕ್ರಿಸ್‌ಮಸ್‌ಕ್ರಿಸ್ತನ ಹುಟ್ಟಿನೊಂದಿಗೆ ಶಾಂತಿಸಂದೇಶವನ್ನು ಸಾರುವ ಹಬ್ಬ. 'ನಿನ್ನ ನೆರೆಯವರನ್ನು ನಿನ್ನಂತೆಯೆ ಪ್ರೀತಿಸು' ಎಂಬ ಸಂದೇಶದ ಮೂಲಕ ಪರಸ್ಪರ ಸಹಬಾಳ್ವೆಯ ಅನಿವಾರ್ಯತೆಯನ್ನುಜಗತ್ತಿಗೆ ಬೋಧಿಸಿದ ಕ್ರಿಸ್ತ ಹುಟ್ಟಿದ ದಿನವೇ ಕ್ರಿಸ್‌ಮಸ್. ಆತನ ಸಂದೇಶ, ಕಾರುಣ್ಯ, ಭಕ್ತಿಯ ಸ್ವರೂಪ, ಪಟ್ಟಭದ್ರ ಶಕ್ತಿಗಳ ವಿರುದ್ಧಆತನ ಚಿಂತನೆಗಳು, ಸಾವಿಗೆ ತನ್ನನ್ನು ಸಮರ್ಪಿಸಿಕೊಂಡ ಬಗೆ, ಇವೆಲ್ಲವೂ ನಮ್ಮ ಕವಿಗಳನ್ನು ಕಾಡಿವೆ. ಕ್ರಿಸ್ತನ ಹುಟ್ಟು ವ್ಯಕ್ತಿತ್ವ ಮತ್ತುಕ್ರಿಸ್‌ಮಸ್‌ಕನ್ನಡ ಕವಿಗಳ ಕಾವ್ಯಾಭಿವ್ಯಕ್ತಿಗೆ ವಸ್ತುವಾದ ಬಗೆಯನ್ನುಇಲ್ಲಿ ಅವಲೋಕಿಸಿದೆ.

ರಾಷ್ಟ್ರಕವಿಗಳಾದ ಕುವೆಂಪು ಮತ್ತುಡಾ. ಜಿ. ಎಸ್. ಶಿವರುದ್ರಪ್ಪನವರ ಕವಿತೆಗಳು ಕ್ರಿಸ್ತನ ಹುಟ್ಟಿನೊಂದಿಗೆಕ್ರಿಸ್ಮ್‌ಸ್‌ಆಚರಣೆಯನ್ನು ನೆನಪಿಸುತ್ತವೆ. ರಾಷ್ಟ್ರಕವಿ ಗೋವಿಂದ ಪೈಗಳ ಗೊಲ್ಗೊಥಾಕ್ರಿಸ್ತನಕೊನೆಯ ದಿನಗಳ ಯಶೋಗಾಥೆಯನ್ನು ನಿರೂಪಿಸುತ್ತದೆ. ಕ್ರಿಸ್ತ–ಕ್ರಿಸ್ಮಸ್ಸನ್ನುಕುರಿತುಕನ್ನಡದಲ್ಲಿ ಪ್ರಕಟವಾಗಿರುವ ಕೆಲವು ಕವಿತೆಗಳನ್ನು 1. ಕ್ರಿಸ್ತನ ಹುಟ್ಟು ಮತ್ತು ವ್ಯಕ್ತಿತ್ವ 2. ಕ್ರಿಸ್‌ಮಸ್ ಎಂಬ ಎರಡು ಭಾಗಗಳಲ್ಲಿ ಈ ಲೇಖನದಲ್ಲಿ ಪ್ರಸ್ತಾಪಿಸಲಾಗಿದೆ.

ಕ್ರಿಸ್ತನ ಹುಟ್ಟು ಮತ್ತುವ್ಯಕ್ತಿತ್ವ :

ಕುವೆಂಪುರವರು 'ಮಾತೆ ಮೇರಿ–ಮಗು ಯೇಸು' ಕವಿತೆಯಲ್ಲಿ ಮೇರಿ ಮತ್ತುಯೇಸುವಿನ, ತಾಯಿ ಮಗುವಿನ ಪ್ರೀತಿಯ ಸೆಲೆಯನ್ನು ವಿವರಿಸುತ್ತಾರೆ. ಯಶೋದೆ ಮತ್ತು ಕೃಷ್ಣನ ಸಂಬಂಧವನ್ನುಕ್ರಿಸ್ತನ ಹುಟ್ಟಿನೊಂದಿಗೆ ಸಮೀಕರಿಸುತ್ತಾರೆ. ಕ್ರಿಸ್ತನನ್ನು ಕೊಲ್ಲಬಯಸಿದ ರಾಜ ಹೆರೋದ, ಕೃಷ್ಣನನ್ನುಕೊಲ್ಲ ಬಯಸಿದ ಕಂಸನ ಸಂದರ್ಭವನ್ನು ನೆನಪಿಸುತ್ತ, ಕ್ರಿಸ್ತಕೃಷ್ಣರಂತಹ ಮಹಾಚೇನತಗಳ ಬದುಕಿನಲ್ಲಿತಾಯಿಯ ಪಾತ್ರವೇನುಎಂಬುದನ್ನು

ಜಗದ್‌ರಕ್ಷಕರಿಗೆರಕ್ಷೆ ಮೇರಿ ಮೇಣ್‌ಯಶೋದೆ

ಇರಲು ನೀನು ರಾಮಕೃಷ್ಣ ಬುದ್ಧಕ್ರಿಸ್ತನಾದೆ !

ಎಂಬ ಮಾತುಗಳಲ್ಲಿ ಅಭಿವ್ಯಕ್ತಿಸಿದ್ದಾರೆ. 'ಕಿಶೋರಕ್ರಿಸ್ತಯೋಗಿ' ಎಂದುಕ್ರಿಸ್ತನನ್ನು ಭಾರತೀಯ ನೆಲೆಯಲ್ಲಿ ಗುರುತಿಸಿದ್ದಾರೆ.

ಕೆ.ಎಸ್. ನರಸಿಂಹಸ್ವಾಮಿಯವರು 'ಡಿಸೆಂಬರಲ್ಲವೆ ಈಗ?' ಕವಿತೆಯಲ್ಲಿಕ್ರಿಸ್ತನ ಹುಟ್ಟನ್ನು ಚಳಿ ಆವರಿಸಿದೆ; ಚಳಿ ಹೆಚ್ಚಿದಷ್ಟು ಹಬ್ಬದ ಸಂಭ್ರಮ ಹೆಚ್ಚು ಎಂದು ನೃತ್ಯಗೀತೆ ಮೃದು ನುಡಿಗಳೊಂದಿಗೆ ಕ್ರಿಸ್ತನನ್ನು ಕವಿ ಸ್ವಾಗತಿಸುತ್ತಾರೆ. ಕ್ರಿಸ್ತನ ಹುಟ್ಟು ನೀಡಬೇಕಾದ ಸಂದೇಶವನ್ನು ಕವಿ ಕೆ.ಎಸ್.ನ ತಮ್ಮ ಮೃದುಮಧುರ ಶೈಲಿಯಲ್ಲಿಅಭಿವ್ಯಕ್ತಿಸುವ ಬಗೆ ಇದು

ಶಾಂತಿ ನೆಲೆಸಬೇಕು

ಬಯಲ ಹಸಿರಿನ ತುಂಬಾ ಹೂವಾಡಬೇಕು

ಪ್ರೀತಿಯೇದೇವರೆಂದವನ ನೆನೆಯಬೇಕು

ಕಣ್ಣಹನಿಗಳ ನಡುವೆ ಕೈ ಮುಗಿಯಬೇಕು

ಕ್ರಿಸ್ತನನ್ನು ಬೇರೆಬೇರೆ ದೃಷ್ಟಿಕೋನಗಳಿಂದ ಕಂಡ ಕವಿಗಳು ಆತನ ಬಹುಮುಖ ವ್ಯಕ್ತಿತ್ವವನ್ನು ಸಮರ್ಥವಾಗಿ ಬಿಂಬಿಸಿದ್ದಾರೆ. ದ. ರಾ. ಬೇಂದ್ರೆಯವರುತಮ್ಮ ವಿಶಿಷ್ಟ ಕಾವ್ಯಾಶೈಲಿಯಲ್ಲಿ, ಭಗವಂತನೇಕ್ರಿಸ್ತನರೂಪದಲ್ಲಿ ಮೈತಳೆದಂತೆ ವರ್ಣಿಸಿದ್ದಾರೆ. ಅವರ 'ಗುರುವೇ !' ಎಂಬ ಪುಟ್ಟಕವಿತೆಯಲ್ಲಿಕ್ರಿಸ್ತನ ಸಮಗ್ರ ಬದುಕನ್ನು ಹಿಡಿದಿಟ್ಟಿದ್ದಾರೆ. ಬೇಂದ್ರೆ ಶೈಲಿಯೇ ಈ ಕವಿತೆಯ ವಿಶಿಷ್ಟು ಧ್ವನಿ. ಶಿಲುಬೆ ಮೇಲೆ ಪ್ರಾಣತೆತ್ತ ಸಂದರ್ಭವನ್ನು 'ಮರದ ಬಾಳನ್ನು ಅಮರಗೈ' ಎಂದುಧ್ವನಿಪೂರ್ಣವಾಗಿಸಿದ್ದಾರೆ.

ಹೆಗಲನೆರಡನ್ನುರೆಕ್ಕೆಗೈ

ಮುಂದೆ ವೈ ಮೇಲೆ ವೈ

ಕವಿತೆಯ ಈ ಸಾಲುಗಳಲ್ಲಿ ಶಿಲುಬೆ ಮೇಲೆ ತೂಗುತ್ತಿರುವಕ್ರಿಸ್ತನಚಿತ್ರಕಣ್ಣಿಗೆಕಟ್ಟುವಂತಿದೆ. ಕೊನೆಯಎರಡು ಮಾತು: 'ಮೇಲೆ ಮೈ' ನಮ್ಮನ್ನೂ ನಿನ್ನಎತ್ತರಕೆಒಯ್ಯಿ ಎಂಬ ಧ್ವನಿಯಿಂದಅರ್ಥಪೂರ್ಣವಾಗಿದೆ.

'ಕರುಣೆಯಕುರುಬ' ಕವನದಲ್ಲಿಸು.ರಂ.ಎಕ್ಕುಂಡಿಯವರುಕ್ರಿಸ್ತನನ್ನುಕುರುಬನನ್ನಾಗಿ ಸಂಕೇತಿಸಿದ್ದಾರೆ. ಜಗತ್ತಿನಜನಮಂದೆ ಎಂಬ ಕುರಿಗಾಹಿಯಾಗಿಕ್ರಿಸ್ತಇಲ್ಲಿ ಬಿಂಬಿತವಾಗಿದ್ದಾನೆ. 'ಹಸಿರು ತಪ್ಪಲಿನಲಿ ಹಸಿವು ಹಿಂಗಿಸಿದ ದಣಿದ । ಕುರಿಗಳನು ಸೆಲೆಯತ್ತಕರೆದೊಯ್ದರು । ಕರುಣೆಯಕುರುಬನನು ಕಂಡುಕರುಬಿದ ತೋಳ । ಗೊಲ್ಗೊಥಾದಲ್ಲಿ ಕೊಲ್ಲಂಬಗೆಳೆದಿತ್ತು' ಎಂಬ ಕವಿತೆಯ ಸಾಲುಗಳು ಕ್ರಿಸ್ತನ ಆದರ್ಶಗಳನ್ನು ಎತ್ತಿ ಹಿಡಿಯುವಂತಿವೆ.

ಎಲ್ಲರನ್ನೂ ಕ್ಷಮಿಸಿ

ಎಲ್ಲವನ್ನೂ ಸಹಿಸಿ

ಜಗದ ನೋವಿಗೆ ನೊಂದನೀ ಮಹಾತ್ಮ

ಕೊಂದರೂಕರುಣೆತೋರಿದ ಹುತಾತ್ಮ

ಎಂದುಕ್ರಿಸ್ತನಇಡೀ ಬದುಕನ್ನು ಕವಿ ಅನಾವರಣಗೊಳಿಸಿದ್ದಾರೆ.

ಕವಿ ಕೆ.ವಿ. ತಿರುಮಲೇಶ್ವರರುಕ್ರಿಸ್ತನನ್ನುಕುರಿತು ರಚಿಸಿರುವ 'ಕ್ರೈಸ್ತನ ನಿಷ್ಕ್ರಮಣ' ಕವಿತೆಯಲ್ಲಿ ಇಂದಿನ ಬದುಕಿನಲ್ಲಿ ಮೌಲ್ಯಗಳನ್ನು ಧೂಳಿಪಟವಾಗುತ್ತಿರುವ ಬಗ್ಗೆ ಹತಾಶೆ ವ್ಯಕ್ತವಾಗಿದೆ. ಮತ್ತೊಮ್ಮೆಕ್ರಿಸ್ತನ ಪ್ರವೇಶವಾದರೆಆತನಉಷ್ಣವನ್ನು ಅಳೆಯುವ, ಅವನನ್ನುರಾಜಕೀಯಖೈದಿಯೆಂದು ನಿರ್ಧರಿಸುವ, ಹುಚ್ಚನೆಂಬ ಹಣೆಪಟ್ಟಿಅಂಟಿಸುವ ಕಾಲ ಇದೆಂದು ಕವಿ ವಿಮರ್ಶಿಸುತ್ತಾರೆ. ನಮ್ಮಲಿರುವ ಮೌಢ್ಯಗಳನ್ನು ನಿವಾರಿಸುವ ಪ್ರಯತ್ನ ಮಾಡಿದರೆಅಪಾಯಖಂಡಿತಾ ಎಂಬ ಸಂದೇಶವನ್ನು ನೀಡುವ ಈ ಕವಿತೆ\

ಕತ್ತಲೆಯಲೇ ನೀ ಕರಗಿ ಹೋಗು

ಹೋಗು

ಎಂದುಕ್ರಿಸ್ತನ ತತ್ವಗಳು ಇಂದು ಮಸಕಾಗುತ್ತಿರುವ ಸಂದರ್ಭವನ್ನು ಚಿತ್ರಿಸಿದ್ದಾರೆ.

'ಕ್ರಿಸ್ತಕಾರುಣ್ಯ' ಬಿದರಹಳ್ಳಿ ನರಸಿಂಹಮೂರ್ತಿಯವರ ಸಶಕ್ತ ಕವಿತೆ. ಕ್ರಿಸ್ತನ ಬದುಕಿನ ಪೂರ್ಣ ವಿವರಗಳನ್ನು ತುಂಬಿಕೊಡುವಲ್ಲಿಇದು ಯಶಸ್ವಿ ಕವಿತೆ. ಅವನ ಕಾರ್ಯ ತತ್ವಗಳನ್ನು ದೇಸಿನೆಲೆಯಿಂದ ಚರ್ಚಿಸುವ ಈ ಕವಿತೆಕ್ರಿಸ್ತನಕಾವ್ಯಾತ್ಮಕ ದಿನಚರಿಯಾಗಿದೆ. ಮೂಗ ಕಿವುಡನನ್ನುಕ್ರಿಸ್ತಗುಣಮಾಡಿದ್ದು, ರಕ್ತಪುಷ್ಪರೋಗಿ ಸ್ತ್ರೀಯನ್ನು ಗುಣಮಾಡಿದ್ದು ಈ ಪವಾಡಕ್ರಿಯೆಯಲ್ಲಿಕ್ರಿಸ್ತನ ವ್ಯಕ್ತಿತ್ವತೆರೆದುಕೊಂಡಿದೆ. ಮೂಗ–ಕಿವುಡ

'ಗಂಟಲುತೆರೆದುಧ್ವನಿಯೊಡೆದು

ನಾಲಿಗೆಯಕಟ್ಟು ಸಡಲಿ ಮಾತು ಹೊರಟಿತು'

ರಕ್ತಮುಷ್ಟರೋಗಿ ಸ್ತ್ರೀ

'ತಟ್ಟನೆ ನಿಂತು ಹೋಯಿತು

ರಕ್ತಕಾರುವ ನರಕ'

ಇಂತಹ ಅನೇಕ ನುಡಿಗಳಲ್ಲಿ ಕಾವ್ಯಾಭಿವ್ಯಕ್ತಿಯಜೊತೆಗೇಕ್ರಿಸ್ತನಜೀವನ ವಿವರಗಳ ಸಮರ್ಥ ಸಂಗ್ರಹವಿದೆ. ಕ್ರಿಸ್ತನ ವ್ಯಕ್ತಿತ್ವವನ್ನುಕುರಿತಇಂತಹ ನೂರಾರು ಕವಿತೆಗಳು ಕನ್ನಡದಲ್ಲಿ ಪ್ರಕಟವಾಗಿವೆ.

ಕ್ರಿಸ್‌ಮಸ್:

ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು ತಮ್ಮ 'ಕ್ರಿಸ್ಮಸ್' ಕವಿತೆಯಲ್ಲಿಕ್ರಿಸ್ತನಆಗಮನವನ್ನು, ಪ್ರಾರ್ಥನೆಯ ಮೊಳಗಿನೊಂದಿಗೆ ವಿವರಿಸುತ್ತಾರೆ. ಆತನ ಮರಣವನ್ನು 'ಶಿಲುಬೆಯಜ್ಞ'ವೆಂದು ಬಣ್ಣಿಸಿದ್ದಾರೆ. 'ಜಗದಗಂಭೀರತೆಯ ಮುಖಬಿಂಬ'ವೆಂದುಕ್ರಿಸ್ತನ ಪಾರಮ್ಯವನ್ನು ಬಿಂಬಿಸಿದ್ದಾರೆ.

ಪ್ರಾರ್ಥನಾಗೀತೆದಲಿ ಮುಳುಗಿಹುದು ಮಂದಿರವು !

ಅದೊ ಒಳಗೆ, ಮೊಂಬತ್ತಿಗಳ ಮಬ್ಬು ಬೆಳಕಿನಲಿ

ನೋಡುಕ್ರಿಸ್ತನ ದಿವ್ಯ ಮಂಗಳ ಮೂರ್ತಿ !

ಹೀಗೆ ಮುಂದುವರೆಯುವಕವಿತೆದೇವರು ಮಾನವನೆದೆಯಲ್ಲಿ ನೆಲೆಸಿರುವನೆಂದರೂ ಮನುಷ್ಯನ ಮೌಢ್ಯತೆದೂರಾಗಿಲ್ಲ ಎಂಬ ವಿವರದೊಂದಿಗೆ ಮುಕ್ತಾಯವಾಗುತ್ತದೆ.

ನಿತ್ಯೋತ್ಸವದ ಕವಿ ನಿಸಾರ್ಅಹಮದ್ಅವರು 'ಶಿಲುಬೆ ಏರುತ್ತಿರುವಜೀಸಸ್' ಕವಿತೆಯಲ್ಲಿಕ್ರಿಸ್ಮಸ್‌ನ ಸಂಭ್ರಮವನ್ನು ಕೇಕು, ಚಳಿ, ನಕ್ಷತ್ರ ದೀಪಗಳೊಂದಿಗೆ ಸ್ವಾಗತಿಸುತ್ತಾರೆ. ಕವಿತೆಯ ಮೊದಲ ನುಡಿ

ಕ್ರಿಸ್ಮಸ್‌ತಂದಿದೆ ಈ ಮನೆಗೆ

ಕೇಕು, ಚಳಿ, ನಕ್ಷತ್ರದೀಪ

ಎಂದುಆರಂಭವಾಗಿ ನಕ್ಷತ್ರ, ಕ್ರಿಸ್ಮಸ್ ಮರ ಪ್ಲಾಸ್ಟಿಕ್ಕಾಗಿ ಬದಲಾದ್ದಕ್ಕೆ ವಿಷಾದಿಸುತ್ತಾರೆ. ಕ್ರಿಸ್ಮಸ್ ಸಂಭ್ರಮದಿಂದಆರಂಭವಾದ ಈ ಕವಿತೆಯಲ್ಲಿಕ್ರಿಸ್ತನ ಬದುಕಲ್ಲಿ ಘಟಿಸಿದ ದುರಂತಗಳನ್ನು ಕವಿ ನಿಸಾರ್ ಸಮಕಾಲೀನ ಪರಿಸ್ಥಿತಿಗಳಿಗೆ ಮುಖಾಮುಖಿಯಾಗಿಸುತ್ತಾರೆ. ಕ್ರಿಸ್ತನನ್ನು ಬಡಿದ ಸುತ್ತಿಗೆ, ಮೊಳೆ, ಮುಳ್ಳು, ಸುಳ್ಳು ಇವೆಲ್ಲ ಮಾಯವಾಗಿಲ್ಲ

ರೈಫಲ್ಲು, ಟ್ಯಾಂಕು, ಬಾಂಬುಗಳು;

ಅವಕ್ಕೆ ಚಾಲನೆಯೊದಗಿಸಿವೆ

ಎಂದು ಸಾಂದರ್ಭಿಕ ಸಂಗತಿಗಳಿಗೆ ಕ್ರಿಸ್ತಕಾಲೀನ ಘಟನೆಗಳನ್ನು ಸಮೀಕರಿಸಿದ್ದಾರೆ.

ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯನವರು 'ಕ್ರಿಸ್‌ಮಸ್ ನೆನಪು' ಕವಿತೆಯಲ್ಲಿ ಕ್ರಿಸ್ಮಸ್ಸಿಗೂ ಭಯೋತ್ಪಾದನೆಯ ಕರಿನೆರಳು ಆವರಿಸಿರುವುದನ್ನು ಪ್ರಸ್ತಾಪಿಸುತ್ತಾರೆ. ಮುದುಕಿ ಮತ್ತು ಮೊಮ್ಮಗಳ ಸಶಕ್ತ ರೂಪಕವೊಂದರ ಮೂಲಕ ಆರಂಭವಾಗುವ ಈ ಕವಿತೆ 'ಚರ್ಚಿನೊಳಗೆ ನೆಮ್ಮದಿಯಿಲ್ಲ, ಜನ ಭಯಭೀತರಾಗಿದ್ದಾರೆ; ಏನೂ ಅರಿಯದ ಬಾಲಕ್ರಿಸ್ತ ಹಾಯಾಗಿ ಮಲಗಿದ್ದಾನೆ' ಎಂದು ಹೇಳುವ ಕವಿ

ಕೈಕುಲುಕ ಬರುವವರ ಸೊಂಟಗಳಲ್ಲಿ

ಬಾಂಬುಗಳಿಲ್ಲವೆಂಬುದಾವ ಗ್ಯಾರಂಟಿ?

ಎಂದು ಪ್ರಶ್ನಿಸುತ್ತಾರೆ. ಕ್ರಿಸ್ಮಸ್ ಸಂತಸದ ಬೆನ್ನಲ್ಲೇಆತಂಕವಾದದಛಾಯೆಯೂ ವ್ಯಾಪಿಸಿದೆ ಎಂಬ ಸೂಕ್ಷ್ಮವನ್ನು ಈ ಕವಿತೆಧ್ವನಿಸುತ್ತದೆ.

ಡಾ. ಯು. ಆರ್. ಅನಂತಮೂರ್ತಿಯವರಕ್ರಿಸ್ಮಸ್ ಪರಿಕಲ್ಪನೆಇವರೆಲ್ಲರಿಗಿಂತ ವಿಭಿನ್ನವಾದದ್ದು. 'ಕೊಟ್ಟಾಯಂನಲ್ಲಿಕ್ರಿಸ್‌ಮಸ್' ಕವಿತೆಯಲ್ಲಿಕ್ರಿಸ್‌ಮಸ್ ಭಾನುವಾರ ಬಂದಕಾರಣ, ಕೇರಳದ ಜನರಜೆಯ ಹಕ್ಕಿಗಾಗಿ ಪ್ರತಿಭಟಿಸಿದ ಸಂದರ್ಭವನ್ನು ನಿರೂಪಿಸುತ್ತಾರೆ. 24ರ ಶನಿವಾರವೇ ಆಫೀಸಿಗೆ ಸಾಮೂಹಿಕ ರಜೆ ಹಾಕಿದ ವಿಚಾರವೂಇಲ್ಲಿಕ್ರಿಸ್‌ಮಸ್‌ಗೆ ವಸ್ತುವಾಗಿದೆ. ಆದರೆಇದೊಂದು ಪ್ರತಿಭಟನೆಎಂಬುದನ್ನು

ಕ್ರಿಸ್ತ ಹುಟ್ಟುತ್ತಾನೆಂದುಕೊಟ್ಟಾಯಂನಲ್ಲಿ

ಮಾಸ್ ಪ್ರೊಟೆಸ್ಟ್

ಎಂಬ ಸಾಲುಗಳಲ್ಲಿ ಧ್ವನಿಸಿದ್ದಾರೆ. ಶ್ರಮಿಕ ವರ್ಗದ ಪ್ರತಿಭಟನೆಗೆಕ್ರಿಸ್ಮಸ್ಸೂಕಾರಣವಾಗಬಹುದಾದ ಸಾಧ್ಯತೆಗಳನ್ನು ಈ ಕವಿತೆ ಪ್ರಸ್ತಾಪಿಸುತ್ತದೆ.

ಶ್ರೀಮತಿ ಸುಧಾ ವಿಶ್ವೇಶ್ವರಯ್ಯಅವರ 'ಅಮೇರಿಕದಲ್ಲಿಕ್ರಿಸ್‌ಮಸ್' ಕವಿತೆ ಕ್ರಿಸ್ಮಸ್ಸಿನ ಸಿದ್ಧತೆಗಳನ್ನು ಮಹತ್ವವನ್ನು ಸರಳವಾಗಿ ನಿರೂಪಿಸಿದ ಕವನ. ಶಾಂತಿದೂತನಾಗಿ ಧರೆಗಿಳಿದ ಕ್ರಿಸ್ತನನ್ನು ಸ್ವಾಗತಿಸುವ ಸಂಭ್ರಮವನ್ನು 'ಕ್ರಿಸ್‌ಮಸ್ ಮರಗಳ ಮೆರಗಿನ ಮಾಟಗಳ ಇಂಬಿಗೆಣೆಯೆ' ಎಂಬ ಮಾತಿನಲ್ಲಿಕವಯಿತ್ರಿ ವ್ಯಕ್ತಪಡಿಸಿದ್ದಾರೆ. ಹಬ್ಬದ ಸಡಗರದಲ್ಲಿಕ್ರಿಸ್ತನ ತತ್ವಗಳನ್ನು ಬದಿಗೊತ್ತಿದ ಸಂದರ್ಭವನ್ನು ನೆನಪಿಸುವ ಕವಿತೆ 'ಮಿಲಿಟರಿ ಬಣ್ಣಗಳ ಕಟ್ಟುತ' ಎಂದು ಸರ್ವಾಧಿಕಾರಿಧೋರಣೆಯನ್ನುಖಂಡಿಸುತ್ತಾರೆ. ಕ್ರಿಸ್ತನ ತತ್ವಗಳಿಂದ

ವಸುಧೆ ವಿರಸ ಗೋಡೆಗಳುರಳಿ

ನೆಲಸುವುದು ಸಮರಸವು

ಇದು ಸಾಧ್ಯವಾಗಬೇಕುಎಂದುಕವಿತೆಯಕೊನೆಯ ಸಾಲುಗಳು ಕ್ರಿಸ್ಮಸ್ ಸಂದೇಶವನ್ನುಅಭಿವ್ಯಕ್ತಿಸುತ್ತವೆ.

ಕನ್ನಡ ಕವಿಗಳು ಕ್ರಿಸ್ತ ಮತ್ತುಕ್ರಿಸ್ಮಸ್ಸನ್ನು ಸ್ವೀಕರಿಸಿ ಅಭಿವ್ಯಕ್ತಿಸಿದ ಬಗೆ ವೈವಿಧ್ಯಮಯವಾದದ್ದು. ಹೆಚ್ಚಿನ ಕವಿಗಳು ಶಾಂತಿ, ಕರುಣೆ, ಕುರುಬ, ಶಿಲುಬೆಗಳನ್ನು ಸಂಕೇತವಾಗಿ ಬಳಸಿದ್ದಾರೆ. ಇಂತಹಇನ್ನೂ ಸಾಕಷ್ಟು ಕವಿತೆಗಳು ಕನ್ನಡದಲ್ಲಿದ್ದು ಅವುಗಳನ್ನು ಕುರಿತು ವಿಸ್ತಾರವಾದಅಧ್ಯಯನ ನಡೆಯಬೇಕಾದಅಗತ್ಯವಿದೆ.